ಮಳೆಗಾಲದ ಬೆಳೆ ರಾಗಿ ಜೋಳ ಬೆಳೆದುಕೊಂಡು, ಹತ್ತು ಗುಂಟೆಯಲ್ಲಿ ಭತ್ತ ಬೆಳೆದುಕೊಂಡು ಜೊತೆಗೆ ಹೈನುಗಾರಿಕೆಯನ್ನು ಮಾಡಿಕೊಂಡು ಅವರು ಚೆನ್ನಾಗಿಯೇ ಬದುಕು ನಡೆಸುತ್ತಿದ್ದರು.

ಹಿರಿಯ ಮಗ ರಾಕೇಶ ಇಪ್ಪತ್ತು ಕಿಲೋಮೀಟರ್ ದೂರದ ನಗರದಲ್ಲಿ ಮಂಡಿಯಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ಮೊಪೆಡ್ನಲ್ಲಿ ಹೋಗಿ ಬರುತ್ತಿದ್ದ. ಅವನು ತಮ್ಮ ಚಂದ್ರನನ್ನು ಆಂಧ್ರದಲ್ಲಿ ಯಾರದೋ ಬೇಕರಿಯಲ್ಲಿ ಕೆಲಸಕ್ಕೆ ಸೇರಿಸಿದ್ದ. ಅವನು ಕೆಲಸ ಕಲಿತುಕೊಂಡು ಬರಲಿ, ಅಷ್ಟರಲ್ಲಿ ದುಡ್ಡು ಮಾಡಿಕೊಂಡು ನಗರದಲ್ಲಿ ಸ್ವಂತ ಬೇಕರಿ ಮಾಡಬಹುದು ಎಂಬ ಇರಾದೆ ರಾಕೇಶನದಾಗಿತ್ತು.. ಆ ವಿಚಾರವನ್ನು ಮನೆಯಲ್ಲಿ ಹೇಳಿದ್ದ. ಅವನು ತನ್ನ ಸಣ್ಣ ಸಂಬಳದಲ್ಲಿ ಬಿಡಿಗಾಸನ್ನೂ ವ್ಯರ್ಥ ಮಾಡದೆ ಕೂಡಿಡುತ್ತಿದ್ದ.

ಹೊನ್ನಮ್ಮನೂ ಅಷ್ಟೆ. ಒಳ್ಳೆಯದಾಗಬೇಕು ಎಂದು ಹೆಣಗಾಡುವ ಮಕ್ಕಳಿಗೆ ತಾನೂ ನೆರವಾಗಬೇಕೆಂದು ಎಲ್ಲದರಲ್ಲೂನು ಹಿಡಿಕಟ್ಟು ಮಾಡುತ್ತಿದ್ದಳು. ಸ್ತ್ರೀ ಶಕ್ತಿ ಸಂಘಕ್ಕೆ ಸೇರಿ ವಾರವಾರ ದುಡ್ಡು ಕಟ್ಟಿ ಉಳಿತಾಯ ಮಾಡುತ್ತಿದ್ದಳು. ರಾತ್ರಿ ಪಾಳಿಯ ಹಾಲು ಹಾಕಲು ಗಂಡ ಪಕ್ಕದೂರಿನ ಡೈರಿಗೆ ಹೋಗಿ ಬಂದಾಗ ಒಮ್ಮೊಮ್ಮೆ, ಚಾಯ್ಸ್ ವಾಸನೆ ಹೊಡೆದಾಗ, ಕಂಡು ಹಿಡಿದು ಗೆಳೆಯರ ಸಹವಾಸ ಬಿಡಿಸಿ ಗಂಡನನ್ನು ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದಳು.

ಬ್ಯಾಂಕಿನ ಪಾಸ್ಬುಕ್ಕು, ಎಟಿಎಂ ಕಾರ್ಡು ಎಲ್ಲವನ್ನು ತನ್ನ ವಶಕ್ಕೆ ತೆಗೆದುಕೊಂಡು ವಾರಕ್ಕೊಮ್ಮೆ ಗಂಡನನ್ನು ಕರೆದುಕೊಂಡು ಪಕ್ಕದೂರಿಗೆ ಹೋಗಿ ಬ್ಯಾಂಕಿನಲ್ಲಿ ಸಂತೆ ಖರ್ಚಿಗೆ ಎಷ್ಟು ಬೇಕೋ ಅಷ್ಟು ಹಣ ಮಾತ್ರ ತೆಗೆದುಕೊಂಡು ಸಂತೆ ವ್ಯಾಪಾರ ಮುಗಿಸಿ ಕೊನೆಗೆ ಹೆಡ್ಡಪ್ಪನ ಚಾಯ್ಸ್ ಚಪಲ ತೀರಿಸಕೊಳ್ಳಲು ಅವನ ಕೈಗೆ ಐವತ್ತು ರೂಪಾಯಿ ಹಾಕುತ್ತಿದ್ದಳು.

ಮನೆಯ ಆರ್ಥಿಕ ಸ್ಥಿತಿ ಉತ್ತಮಗೊಳಿಸಬೇಕೆಂಬ ಹಂಬಲದಿಂದ ಹಾಲಿನ ದುಡ್ಡಿನ ಉಳಿತಾಯದಲ್ಲಿ ಹಿಂದಿನ ವರ್ಷವಷ್ಟೇ ಮತ್ತೊಂದು ಒಳ್ಳೆಯ ಕರಾವಿನ ಹಸು ಖರೀದಿ ಮಾಡಿಸಿ ತಂದಿದ್ದಳು.

ಹೀಗೆ ರೈತ ಕುಟುಂಬವೊಂದು ತನ್ನ ಇಚ್ಛಾ ಶಕ್ತಿಯಿಂದಲೇ ಅಭಿವೃದ್ಧಿ ಪಥದಲ್ಲಿ ಸಾಗಲು ಪಣ ತೊಟ್ಟಿದ್ದಾಗ ರಾಜಶೇಖರ್ ಎಂಬ ಕೃಷಿ ಅಧಿಕಾರಿ ಕೃಷಿ ಹೊಂಡ ಎಂಬ ಯೋಜನೆಯನ್ನು ತೆಗೆದುಕೊಂಡು ಹೆಡ್ಡಪ್ಪನ ಮನೆಯ ಬಾಗಿಲಿಗೇ ಬಂದಿದ್ದ. ಆಗ ಹೊನ್ನಮ್ಮ ಒಬ್ಬಳೇ ಮನೆಯಲ್ಲಿದ್ದಳು.

ಸರ್ಕಾರ ರೂಪಿಸುವ ಯೋಜನೆಗಳೇನೋ ಆಕರ್ಷಕವಾಗಿಯೇ ಇರುತ್ತವೆ. ಆದರೆ, ಕಾರ್ಯಗತಗೊಳಿಸುವ ವೇಳೆ ಸ್ವಾರ್ಥ ಲಾಲಸೆಯ ಜನರ ಕೈಗೆ ಸಿಕ್ಕಿ ಮಗ್ಗಲು ಮಗುಚಿಕೊಳ್ಳುತ್ತವೆ.

ಆ ವಿಚಾರ ಹೊನ್ನಮ್ಮನಿಗೂ ಗೊತ್ತಿತ್ತು. ತನ್ನ ತೌರಿನ ಕಡೆಯ ನೆಂಟರೊಬ್ಬರು ಕೃಷಿ ಹೊಂಡ ತೋಡಿಸಿ, ಸರ್ಕಾರದ ಏಜೆಂಟರು ಬೇಕಾಬಿಟ್ಟಿ ಕೆಲಸ ಮಾಡಿ ಹೋಗಿದ್ದರಿಂದ, ಮಳೆಗಾಲದಲ್ಲಿ ನೀರು ನಿಂತಾಗ ಅದು ಕುಸಿದು ಹೊಲವೂ ಇಲ್ಲ ಹೊಂಡವೂ ಇಲ್ಲ ಅಂತ ಆದುದನ್ನು ಅವಳು ಕಣ್ಣಾರೆ ಕಂಡಿದ್ದಳು.

ಹಾಗಾಗಿ ಬಂದವರಿಗೆ ಮಾತಿಗೂ ಆಸ್ಪದ ಕೊಡದೆ 'ನಿಮ್ಮ ಕೃಷಿ ಹೊಂಡ ಬೇಡ' ಎಂದು ನಿರಾಕರಿಸಿದ್ದಳು. ಆದರೆ, ಅಧಿಕಾರಿ ಸರ್ಕಾರಿ ಯೋಜನೆಯನ್ನು ಕಾರ್ಯಗತಗೊಳಿಸದೆ ಬಿಟ್ಟಾನೆ. ಅದೂ ಇಂತಹ ಲಾಭದ ಬಾಬತ್ತು. ಅವನ ಮೇಲಿನವರು ಬಿಡುತ್ತಾರೆಯೇ. ಮರುದಿನ ಮತ್ತೆ ಬಂದ ಅಧಿಕಾರಿ ಗದ್ದೆಹಳ್ಳದಲ್ಲಿ ಕೆಲಸ ಮಾಡುತ್ತಿದ್ದ ಹೆಡ್ಡಪ್ಪನನ್ನು ಹಿಡಿದಿದ್ದ, ಜತೆಗೆ ಅಲ್ಲೇ ಅಸುಪಾಸಿನಲ್ಲಿದ್ದ ಹೆಡ್ಡಪ್ಪನ ಡೈರಿ ಗೆಳೆಯರನ್ನು ಮಾತಿಗೆ ಸೇರಿಸಿಕೊಂಡಿದ್ದ.

ಮೊದಮೊದಲಿಗೆ ಹೆಡ್ಡಪ್ಪ ನಿರಾಕರಿಸಿದ 'ನಮ್ಮ ಹೆಂಗಸರು ನಿನ್ನೆನೇ ಬೇಡ ಅಂತ ಹೇಳಿ ಕಳಿಸಿದಾರಂತಲ್ಲ ಆ ವಿಚಾರ ಬಿಡಿ' ಎಂದಿದ್ದ. ಅಧಿಕಾರಿ ಬಗ್ಗಲೇಬಾರದೆಂದು ನಿರ್ಧರಿಸಿಯೇ ಬಂದಿದ್ದ. 'ರೈತರ ಉದ್ಧಾರಕ್ಕೆಂದೇ ಮಾಡಿರುವ ಘನ ಸರ್ಕಾರದ ಯೋಜನೆ ಇದು. ಮನೆ ಬಾಗಿಲಿಗೇ ಬಂದು ಒಂದಾಣೆ ಖರ್ಚಿಲ್ಲದಂಗೆ ಮಾಡಿಕೊಡ್ತೀವಿ ಅಂದ್ರೂ ಬ್ಯಾಡ ಅಂತೀರಲ್ಲ ಗೌಡ್ರೇ, ನೀವೇನು ಹೆಡ್ರಾ ಬುದ್ಧಿವಂತ್ರಾ ಅಂತ.. ಹೆಂಗಸರಿಗೇನು ಗೊತ್ತಾಗುತ್ತೇರಿ ವ್ಯವಹಾರ ಜ್ಞಾನ. ಮನೆ ಯಜಮಾನರು ನೀವು ನಿರ್ಧಾರ ಮಾಡಬೇಕು' ಎನ್ನುತ್ತಲೇ ಡೈರಿ ಗೆಳೆಯರ ಕಡೆ ತಿರುಗಿ 'ನೀವಾದ್ರೂ ಹೇಳ್ರಿ ಗೌಡ್ರೆ ಹೆಡ್ಡಪ್ಪರಿಗೆ, ಹೊಂಡದ ನೀರಲ್ಲಿ ಬೇಸಿಗೆ ಬೆಳೆ ತರಕಾರಿ ಬೆಳೆದು ಅದರಲ್ಲಿ ಲಕ್ಷಾಂತರ ಲಾಭ ಬಂದ್ರೆ ನಮಗೆ ಕೊಡ್ತಾರ... ನಮ್ಮ ದೇಶದ ರೈತರಿಗೆ ಬುದ್ಧಿ ಯಾವಾಗ ಬರುತ್ತೋ' ಎಂದು